ದಿನಾಂಕಃ 23.05.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಹಾಜರು ಪಡಿಸಿರುತ್ತೇನೆ. ಅದರಲ್ಲಿರುವ ಅಂಶಗಳೆಲ್ಲಾ ಸತ್ಯವಾಗಿರುತ್ತವೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ನಾನು ಅಂಗನ್ಯೂನ್ಯತಾ ಪ್ರಮಾಣಪತ್ರ ಹಾಗೂ ಒಂದು ಎಕ್ಸ್‌ರೇ ಯನ್ನು ಹಾಜರು ಪಡಿಸಿದ್ದು, ನೋಡಿ ಗುರುತಿಸುತ್ತಿದ್ದೇನೆ. ಅವುಗಳನ್ನು ನಿಪಿ40 ಮತ್ತು 41 ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ40 ರಲ್ಲಿ ತನ್ನ ಸಹಿ ಗುರುತಿಸಿದ್ದು, ಅದನ್ನು ನಿಪಿ40(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ

ಸಾಮಾನ್ಯವಾಗಿ ಗಾಯಗೊಂಡ ವ್ಯಕ್ತಿ ನಮ್ಮ ಆಸ್ಪತ್ರೆಗೆ ಬಂದರೆ ಪೋಲಿಸ್‌ರಿಗೆ ಮಾಹಿತಿ ಸಲ್ಲಿಸುತ್ತೇವೆ ಎಂದರೆ ಸರಿ. ಪೋಲಿಸ್‌ರಿಗೆ ನೀಡಿದ ಮಾಹಿತಿ ಪತ್ರದಲ್ಲಿ ನಾನು ಗಾಯದ ಸ್ವರೂಪವನ್ನು ನಮೂದು ಮಾಡಿಲ್ಲ. ಪೋಲಿಸ್‌ರಿಗೆ ಮಾಹಿತಿ ನೀಡುವ ಸಮಯದಲ್ಲಿ ಯಾವ ಕಾರಣಕ್ಕಾಗಿ ನೀವು ಗಾಯಗಳನ್ನು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಆ ರೀತಿ ಇಲ್ಲಿಯವರೆಗೂ ಯಾವುದೇ ಪ್ರಕರಣದಲ್ಲಿ ನಾನು ನಾಮೂದಿಸಿಲ್ಲ, ಗಾಯಾಳುವನ್ನು ವೈದ್ಯಕಿಯ ಪರೀಕ್ಷೆಗೆ ಒಳಪಡಿಸಿದ ನಂತರ ಗಾಯದ ಪ್ರಮಾಣಪತ್ರದಲ್ಲಿ ಅವರಿಗೆ ಕಂಡು ಬಂದ ಗಾಯದ ಪ್ರಮಾಣಪತ್ರಗಳಲ್ಲಿ ನಮೂದಿಸುತ್ತೇವೆ ಎನ್ನುತ್ತಾರೆ. ಸಾಮಾನ್ಯವಾಗಿ ಗಾಯದ ಪ್ರಮಾಣಪತ್ರವನ್ನು ಪೋಲಿಸ್‌ರು ಅಪಘಾತವಾದ ಒಂದು ತಿಂಗಳ ನಂತರ ನಮ್ಮಿಂದ ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಪೋಲಿಸ್‌ರಿಗೆ ನೀಡಿದ ಮಾಹಿತಿಯಲ್ಲಿ ಗಾಯದ ಸ್ವರೂಪವನ್ನು ನಮೂದು ಮಾಡಿದ್ದರೆ ನಾವು ಮುಂದೆ ನಮಗೆ ಬೇಕಾದ ರೀತಿಯಲ್ಲಿ ಗಾಯದ ಸ್ವರೂಪಗಳನ್ನು ನಮೂದಿಸಲು ಸಾಧ್ಯವಾಗುವುದಿಲ್ಲ ಎಂಬ ಕಾರಣದಿಂದ ನಾನು ಪೋಲಿಸ್‌ರಿಗೆ ನೀಡಿದ ಮಾಹಿತಿಯಲ್ಲಿ ಗಾಯದ ಸ್ವರೂಪವನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

2. ಅರ್ಜಿದಾರರ ವಯಸ್ಸನ್ನು ನಾನು ಅವರ ಹೇಳಿಕೆಯ ಮೇಲೆ ಬರೆದಿದ್ದೇನೆ. ನಾನು ವಯಸ್ಸಿಗೆ ಸಂಭಂದಿಸಿದ ವೈದ್ಯಕೀಯ ಪರೀಕ್ಷೆ ಮಾಡಿ ವಯಸ್ಸನ್ನು ನಮೂದಿಸಲು ತೊಂದರೆ ಇರಲಿಲ್ಲ. ಅರ್ಜಿದಾರರು ಯಾವ ಉದ್ಯೋಗ ಮಾಡುತ್ತಾರೆ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಕನ್ಸರ್ವೇಟೀವ್ ಟ್ರೀಟ್ ಮೆಂಟ್ ಮಾತ್ರ ಮಾಡಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಕೇ-ವಾಯರ್‌ನ್ನು ಅಳವಡಿಸಿ ಶಸ್ತ್ರಚಿಕಿತ್ಸೆ ಮಾಡುವ ಗಾಯವಾಗಿರಲಿಲ್ಲ ಎಂದರೆ ಸರಿಯಲ್ಲ. ಅಂಗನ್ಯೂನ್ಯತಾ ಪ್ರಮಾಣಪತ್ರದಲ್ಲಿ ನಾನು ಅರ್ಜಿದಾರರಿಗೆ ಏನೆಲ್ಲಾ ಚಿಕಿತ್ಸೆ ನೀಡಿದ್ದೇನೆ ಎಂದು ನಮೂದು ಮಾಡಿಲ್ಲ ಆದರೆ ಡಿಸ್ಚಾರ್ಜ್ ಸಮ್ಮರಿಯಲ್ಲಿ ಮಾಡಿದ್ದೇನೆ. ಅಂಗನ್ಯೂನ್ಯತಾ ಪ್ರಮಾಣಪತ್ರವನ್ನು ಡಿಸ್ಚಾರ್ಜ್ ಸಮ್ಮರಿಯನ್ನು ನೋಡಿ ತಯಾರಿಸಿದ್ದೇನೆ ಎಂದು ನಾನು ಬರೆದಿಲ್ಲ. ನಾನು ಯಾವುದೇ ರೀತಿ ಅಂಗನ್ಯೂನ್ಯತಾ ಪ್ರಮಾಣವನ್ನು ಪರೀಕ್ಷೆ ಮಾಡದೇ, ನಿರ್ಧರಿಸದೇ ಅಂದಾಜಿನ ಮೇಲೆ ಅಂಗನ್ಯೂನ್ಯತೆ ಪ್ರಮಾಣವನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

3. ನಾನು ಅರ್ಜಿದಾರರು ಯಾವಾಗ, ಏನು ಚಿಕಿತ್ಸೆ ಪಡೆದುಕೊಂಡಿದ್ದಾರೆ ಎಂದು ತೋರಿಸಲು ಕೇಸ್‌ಶೀಟ್‌ನ್ನು ಹಾಜರು ಪಡಿಸಿಲ್ಲ, ಅದನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ನನ್ನ ಬಳಿ ಆ ಕೇಸ್‌ಶೀಟ್ ಇರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಾಗಲೇ ಅರ್ಜಿದಾರರು ಹಾಜರು ಪಡಿಸಿರುವ ಎಕ್ಸ್‌ರೇ ಹಾಗೂ ಈ ದಿನ ನಾನು ಹಾಜರು ಪಡಿಸಿರುವ ಎಕ್ಸ್‌ರೇಯನ್ನು ಹೋಲಿಕೆ ಮಾಡಿದ ನಂತರವೇ ನಾನು ಅಂಗನ್ಯೂನ್ಯತೆಯ ಪ್ರಮಾಣಪತ್ರ ನೀಡಬೇಕು ಎಂದರೆ ಸರಿಯಲ್ಲ. ಆ ರೀತಿ ಹೋಲಿಕೆ ಮಾಡದೇ ಅರ್ಜಿದಾರರಿಗೆ ಅನುಕೂಲವಾಗಲಿ ಎಂದು ನಾನು ಸುಳ್ಳು ಅಂಗನ್ಯೂನ್ಯತೆ ಪ್ರಮಾಣಪತ್ರವನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕೇ-ವಾಯರ್ ಮತ್ತು ವಾಯರ್ಸ್ ಗಳನ್ನು 6 ತಿಂಗಳಲ್ಲಿ ಹೊರತೆಗೆಯುತ್ತಾರೆ ಎಂದರೆ ಸರಿಯಲ್ಲ, ಒಂದು ವರೆ ವರ್ಷದ ನಂತರ ತೆಗೆಯುತ್ತಾರೆ. ಕೇ-ವಾಯರ್‌ನ್ನು ಹೊರತೆಗೆದ ನಂತರ ಅಂಗನ್ಯೂನ್ಯತೆಯ ಪ್ರಮಾಣ ಕಡಿಮೆ ಆಗುತ್ತದೆ ಎಂದರೆ ಸರಿಯಲ್ಲ.

4. ಅರ್ಜಿದಾರರು ನನ್ನ ಬಳಿ ಬಂದಿದ್ದರು, ಅವರು ಅವರಿಗೆ ಆಗುವ ಸಮಸ್ಯೆಗಳ ಬಗ್ಗೆ ಹೇಳಿದ್ದಾರೆ ಎಂದು ನನ್ನ ಪ್ರಮಾಣಪತ್ರದಲ್ಲಿ ವಿವರಿಸಿರುವುದು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ಕ್ಲಿನಿಕಲ್ ಎಕ್ಸಾಮಿನೇಶನ್ ಬಗ್ಗೆ ನೀಡಿರುವ ವಿವರಣೆ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ಇಂಪ್ಲ್ಯಾಂಟ್‌ನ್ನು ಹೊರತೆಗೆಯಲು 30 ಸಾವಿರ ಖರ್ಚು ಆಗುತ್ತದೆ ಎಂದು ತೋರಿಸುವ ದಾಖಲೆಯನ್ನು ಹಾಜರು ಪಡಿಸಿಲ್ಲ. ಇಷ್ಟೇ ಖರ್ಚು ಆಗುತ್ತದೆ ಎಂದು ವಿವರವಾಗಿ ವಿವರಿಸಿ ಹೇಳಲು ನನಗೆ ತೊಂದರೆ ಇರಲಿಲ್ಲ ಅದರೆ ಅಂದಾಜಿನ ಮೇಲೆ ನಾನು 30 ಸಾವಿರ ಬರೆದಿದ್ದೇನೆ. ಈ ರೀತಿ 30 ಸಾವಿರ ಖರ್ಚು ಆಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೂರ್ಣ ಬಲಗೈ ಗೆ ನಾನು ತೋರಿಸಿರುವ ಶೇ.35 ರ ಅಂಗನ್ಯೂನ್ಯತೆಯನ್ನು ಹೋಲಿಸಿದಾಗ ಅಷ್ಟೆ ಆಗುತ್ತದೆ. ಅರ್ಜಿದಾರರ ಉದ್ಯೋಗ ಹಾಗೂ ಅವರಿಗೆ ಆದ ಗಾಯಗಳನ್ನು ಆಧರಿಸಿದರೆ ಅವರ ಪೂರ್ಣ ದೇಹದ ಅಂಗನ್ಯೂನ್ಯತೆ ಶೇ.3 ರಿಂದ 4 ರಷ್ಟು ಬರುತ್ತದೆ ಎಂದರೆ ಸರಿಯಲ್ಲ.

5. ನಾನು ಅಂಗನ್ಯೂನ್ಯತೆಯನ್ನು ಅಲಿಮ್ಕೋ ಗೈಡ್ ಲೈನ್ಸ್ ಮತ್ತು ಡಬ್ಲೂ.ಎಚ್.ಓ ಗೈಡ್ ಲೈನ್ಸ್‌ನ್ನು ಆಧರಿಸಿ ಅಂಗನ್ಯೂನ್ಯತೆಯನ್ನು ನಿರ್ಧರಿಸಿದ್ದೇನೆ. ಈ ರೀತಿ ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ತೋರಿಸಿಲ್ಲ. ಅಂಗನ್ಯೂನ್ಯತೆ ಪ್ರಮಾಣಪತ್ರದಲ್ಲಿ ತೋರಿಸಿದ್ದೇನೆ. ನಾನು ನೀಡಿರುವ ಅಂಗನ್ಯೂನ್ಯತೆ ಪ್ರಮಾಣಪತ್ರ ಅಲಿಮ್ಕೋ ಗೈಡ್ ಲೈನ್ಸ್ ಪ್ರಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರರು ಹೆಚ್ಚು ಪರಿಹಾರ ಪಡೆದುಕೊಳ್ಳಲಿ ಎಂದು ಹೆಚ್ಚು ವೈದ್ಯಕೀಯ ಬಿಲ್ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ನೀಡಿರುವ ಬಿಲ್ ಸಾದಾ ಬಿಲ್ ಇದೆ ಎಂದರೆ ಸರಿ. ಅರ್ಜಿದಾರರಿಗೆ 60 ವರ್ಷ ವಯಸ್ಸಾಗಿದ್ದು, ಅವರು ಮೊದಲಿನ ರೀತಿಯಲ್ಲಿ ಕೆಲಸ ಮಾಡಿಕೊಂಡು ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ಅವರಿಗೆ ಯಾವುದೇ ರೀತಿ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ನನ್ನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎಂದು ಅವರಿಗೆ

ಅನುಕೂಲವಾಗಲಿ ಎಂದು ಹೆಚ್ಚಿನ ಹಣದ ಬಿಲ್‌ನ್ನು ನೀಡಿ ಸುಳ್ಳು ಅಂಗನ್ಯೂನ್ಯತೆ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಎದುರುದಾರರು ಏಕಪಕ್ಷೀಯವಾಗಿದ್ದಾರೆ.

<u>ಮರುವಿಚಾರಣೆ:</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ